# ಶ್ರೀರಂಗಪಟ್ಟಣ ತಾಲ್ಲೂಕಿನ ಪ್ರಮುಖ ದೇವಿ ಶಿಲ್ಪಗಳು

**ಸತೀಶ್ ಪಿ.**

ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕ.ರಾ.ಮು.ವಿ., ಮೈಸೂರು.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294383**

**ABSTRACT:**

ಶ್ರೀ ರಂಗಪಟ್ಟಣವು ಮಂಡ್ಯ ಜಿಲ್ಲೆಯ ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿದೆ ಮತ್ತು ಇದು ಟಿಪ್ಪು ಸುಲ್ತಾನನ ಆಳ್ವಿಕೆಯಲ್ಲಿ ರಾಜಧಾನಿಯಾಗಿತ್ತು. ಈ ತಾಣವು ಬೇಸಿಗೆಯ ಅರಮನೆ, ಕೋಟೆ, ಶ್ರೀ ರಂಗನಾಥ ದೇವಸ್ಥಾನ, ಗುಂಬಜ್, ಪಕ್ಷಿಧಾಮ ಮತ್ತು ಪ್ರವಾಸೋದ್ಯಮ ಸ್ಥಳಗಳಿಗೆ ಹೆಸರುವಾಸಿಯಾಗಿದೆ. ಆ ಪ್ರದೇಶದಲ್ಲಿ ಕಾವೇರಿ ನದಿಯ ದಡದಲ್ಲಿರುವ ಅನೇಕ ಪ್ರಸಿದ್ಧ ದೇವಿ ದೇವಾಲಯಗಳು ಸೂಕ್ತವಾಗಿವೆ. ಗೌತಮೆ ಮಹರ್ಷಿ ಮಹಾವಿಷ್ಣುವನ್ನು ಒರಗಿರುವ ಭಂಗಿಯಲ್ಲಿ ವೀಕ್ಷಿಸಲು ಈ ಸ್ಥಳದಲ್ಲಿ ಕಠಿಣ ತಪಸ್ಸು ಮಾಡಿದ್ದರು. ಈ ಸ್ಥಳದಲ್ಲಿ ವಿಷ್ಣುವು ತನ್ನನ್ನು ರಂಗನಾಥ ಸ್ವಾಮಿಯಾಗಿ ಚಿತ್ರಿಸಿಕೊಂಡಿದ್ದಾನೆ.

ಗೌತಮ ಮಹರ್ಷಿಯು ಅವರನ್ನು ಶಾಶ್ವತವಾಗಿ ಇಲ್ಲಿಯೇ ಇರುವಂತೆ ಕೇಳಿಕೊಂಡರು. ಆದ್ದರಿಂದ ಮುಂಬರುವ ಯುಗಗಳಲ್ಲಿ ಭಕ್ತರು ಈ ಭಗವಂತನನ್ನು ಪ್ರರ್ಥಿಸುತ್ತಾರೆ. ಶ್ರೀ ರಂಗಪಟ್ಟಣವು ಕ್ರಿ.ಶ. 1799 ಯಲ್ಲಿ ನಡೆದ ಆಂಗ್ಲೋ ಮೈಸೂರು ಯುದ್ಧದ ಕೊನೆಯ ಮತ್ತು ನಿರ್ಣಾಯಕ ಕದನ ನಡೆದ ಸ್ಥಳವಾಗಿದೆ.

ನಾನು ಕೆಲವು ಮುಖ್ಯ ದೇವಿ ಶಿಲ್ಪಗಳನ್ನು ಶ್ರೀರಂಗಪಟ್ಟಣದ ಸುತ್ತಲೂ ಕಂಡುಹಿಡಿದಿರುವುದನ್ನು ತೋರಿಸಲು ಪ್ರಯತ್ನಿಸುತ್ತೇನೆ. ಕ್ಷೇತ್ರ ಕಾರ್ಯದ ಆಧಾರದ ಮೇಲೆ ಅವುಗಳ ಪ್ರತಿಮಾಶಾಸ್ತ್ರದ ಬಗ್ಗೆ ಮಾಹಿತಿಯನ್ನು ನೀಡುತ್ತೇನೆ.

**KEYWORDS:**

ನಿಮಿಷಾಂಭ, ಫೌಂಡರೀಕ, ಪಾರ್ವತಿದೇವಿ, ಪ್ರತಿಮಾಶಾಸ್ತ್ರ, ಆಹಾರ ವ್ಯವಸ್ಥೆ, ದೇವಿ ವಿಧಗಳು, ಮಂತ್ರಗಳು.

## 1. ಶ್ರೀ ನಿಮಿಷಾಂಬದೇವಿ ದೇವಸ್ಥಾನ:

ಈ ದೇವಾಲಯವು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಐತಿಹಾಸಿಕ ಪುರಾಣ ಪ್ರಸಿದ್ಧ ಯಾತ್ರಾಸ್ಥಳ/ಪ್ರವಾಸಿ ತಾಣವಾಗಿದೆ. ಈ ದೇವಾಲಯವು ಶ್ರೀರಂಗಪಟ್ಟಣದಿಂದ 3 ಕಿ.ಮೀ. ದೂರದಲ್ಲಿದೆ. ಅದರಲ್ಲೂ ಗಜಾಂ ಗ್ರಾಮದ ಕಾವೇರಿ ನದಿ ತೀರದಲ್ಲಿ ಇದೆ. ಈ ದೇವಾಲಯವನ್ನು ಆಗಮೋಕ್ತ ರೀತ್ಯಾ ವಿಧಾನದ ಪ್ರಕಾರ ನಿರ್ಮಿಸಲಾಗಿದೆ. ಈ ಶ್ರೀರಂಗಪಟ್ಟನವು ಕ್ರಿ.ಶ. 1578 ರಿಂದ 1617 ರವರೆಗೆ ಮೈಸೂರಿನ ರಾಜಧಾನಿ ಆಗಿತ್ತು. ಇಲ್ಲಿ ರಾಜ ಒಡೆಯರ್‌ರವರು ಈ ನಿಮಿಷಾಂಬ ದೇವಿಯ ಪ್ರತಿಷ್ಟಾಪಿಸಿ

ದೇವಾಲಯ ಕಟ್ಟಿಸಿದರೆಂದು ತಿಳಿಯಬಹುದಾಗಿದೆ.

**ಹಿನ್ನೆಲೆ:** ಶ್ರೀ ಪರಮೇಶ್ವರನ ಆಜ್ಞೆಯಂತೆ ಸುಮನಸ್ಕನು ಪೌಂಡರೀಕ ಯಾಗವನ್ನು ಲೋಕ ಕಲ್ಯಾಣಾರ್ಥಕ್ಕಾಗಿ ಮಾಡಲು ನಿಶ್ಚಯಿಸಿ ಅದರಂತೆ ಈ ಯಾಗದ ರಕ್ಷಣೆಯನ್ನು ಸಾಕ್ಷತ್ ರುದ್ರರೂಪಿಯಾದ ಮುಕ್ತಕ ಎಂಬ ಋಷಿಗೆ ವಹಿಸಿದರು. ಈ ವಿಚಾರವನ್ನು ತಿಳಿದ ಜಾನು/ಸುಮಂಡಲರು ಹೇಗಾದರೂ ಮಾಡಿ ಈ ಯಾಗವನ್ನು ಕೆಡಿಸಬೇಕೆಂದು ತಮ್ಮ ಗುರುಗಳಾದ ಶುಕ್ರಾಚಾರ್ಯರನ್ನು ಮಂತ್ರಾಲೋಚನೆ ನಡೆಸಿದರು ಹಾಗೂ ತಮ್ಮ ಮಂತ್ರಿಯಾದ ಶೂರಬಾಹು/ಘಟೋದರರೊಂದಿಗೆ ಸೈನ್ಯವನ್ನು ಕಳುಹಿಸಿದರು. ಆದರೆ ಇವರ ಸೈನ್ಯವನ್ನು ಕ್ಷಣಾರ್ಧದಲ್ಲಿ 'ಮುಕ್ತಕ' ಎಂಬ ಋಷಿಯು ಸಂಹರಿಸಿದನು. ಈ ಸುದ್ದಿಯನ್ನು ತಿಳಿದ ಜಾನು/ಸುಮಂಡಲರು ಕೋಪಗೊಂಡು ಸ್ವತಃ ತಾವೇಮುಕ್ತಕ ಋಷಿಯೊಡನೆ ಯುದ್ದಕ್ಕೆಸನ್ನದ್ದರಾದರು. ಇವರ ಇಬ್ಬರ ನಡುವೆ ವೀರಾವೇಶದಿಂದ ಯುದ್ಧ ಆರಂಭವಾಗಿತ್ತು. ಈ ಯುದ್ಧದಲ್ಲಿ ಮುಕ್ತಕನು ಸಂಪೂರ್ಣ ಸೋಲನ್ನು ಅನುಭವಿಸಬೇಕಾಯಿತು. ಇದೇ ಸಂದರ್ಭದಲ್ಲಿ ಈ ಋಷಿಯು ಪಾರ್ವತಿಯನ್ನು ಕುರಿತು ಪ್ರಾರ್ಥಿಸಿದನು. ತಕ್ಷಣ ಈ ದೇವಿಯು ಯಜ್ಞಕುಂಡಲದಿಂದ ಉದ್ಭವಿಸಿದಳು. ಈ ಹಿಂದೆ ಜಾನು/ಸುಮಂಡಲರು ನಮ್ಮನ್ನು ಯಾವುದೇ ಆಯುಧದಿಂದ ನಮ್ಮ ಸಂಹಾರ ಆಗಬಾರದೆಂದು ಬ್ರಹ್ಮನಿಂದ ವರ ಪಡೆದಿದ್ದನ್ನು ತಿಳಿದ ಪಾರ್ವತಿ ದೇವಿಯು ಆಯುಧಗಳನ್ನು ಬಿಟ್ಟು ತನ್ನ ದಿವ್ಯದೃಷ್ಟಿಯಿಂದ ಒಂದೇ ನಿಮಿಷ ಮಾತ್ರದಲ್ಲಿ ಅವರನ್ನು ಸಂಹರಿಸಿದಳು ಹಾಗೂ ಈ ಪೌಂಡರೀಕ ಯಾಗವು ಪೂರ್ಣಗೊಳ್ಳುವಂತೆ ನೋಡಿಕೊಂಡಳು. ಇದರಿಂದ ಸಂತುಷ್ಟನಾದ ಮುಕ್ತಕ ಋಷಿಯು 'ಓ ಜಗನ್ಮಾತೆ ನಿಮಿಷಾಂಬಾ' ಎಂದು ಕರೆಯುತ್ತಿದ್ದ ಕಾರಣ ಅಂದಿನಿಂದ ಪಾರ್ವತಿದೇವಿಗೆ ನಿಮಿಷಾಂಬ ದೇವಿ ಎಂದು ಹೆಸರು ಬಂದಿತು.

**ಪ್ರತಿಮಾಶಾಸ್ತ್ರ:** ಈ ಶಾಸ್ತ್ರದ ಪ್ರಕಾರ ದೇವಿಯು ಭೂ ಪ್ರಸಾರ ಕೃಷ್ಣಶಿಲೆಯಲ್ಲಿ ಕೆತ್ತಲ್ಪಟ್ಟ ಏಕಾಸನದಲ್ಲಿ ಕುಳಿತಿರುವ ನಿಮಿಷಾಂಬಾ ದೇವಿ ಮುಖಚರ್ಯೆಯಲ್ಲಿ ಮುಗುಳುನಗೆ ಸೂಸುವ ಶ್ರೀಚಕ್ರಾಂಕಿತೆಯಾಗಿ ಗೋಚರಗೊಂಡಿದ್ದಾಳೆ.

ಈ ದೇವಿಯ ಕೈಯಲ್ಲಿ 4 ಕೈಗಳಿದ್ದು ಎರಡು ಕೈಗಳು, ತ್ರಿಶೂಲ, ಡಮರು, ಉಳಿದ 2 ಕೈಗಳಲ್ಲಿ ಅಭಯಹಸ್ತ ಮತ್ತು ವರದ ಹಸ್ತಗಳಿಂದ ಶೋಭಿಸುವ ತಾಯಿಯಾಗಿದ್ದಾಳೆ.

**ಹರಕೆಗಳು:** ಈ ದೇವಿಯಲ್ಲಿ ಭಕ್ತರು ಕೇವಲ ದರ್ಶನದಿಂದ ಮಾತ್ರ ಇಷ್ಟಾರ್ಥಗಳು ಈಡೇರುವುದಲ್ಲದೆ ಮನಸ್ಸಿಗೆ ಶಾಂತಿ, ನೆಮ್ಮದಿ, ಮದುವೆಯಾಗದವರಿಗೆ ಕಲ್ಯಾಣಭಾಗ್ಯ, ಸಂತಾನಭಾಗ್ಯ, ಆರ್ಥಿಕ ತೊಂದರೆಯಲ್ಲಿರುವವರಿಗೆ ಧನಭಾಗ್ಯ, ಆರೋಗ್ಯ ಭಾಗ್ಯ/ ವಿದ್ಯಾಭಾಗ್ಯವೂ ಪ್ರಾಪ್ತಿಯಾಗುವುದರ ಮೂಲಕ ಭಕ್ತಾಧಿಗಳ ಕಷ್ಟ ಇಷ್ಟಗಳನ್ನು ಪೂರೈಸುವ ಆರಾಧ್ಯದೈವ ಸ್ವರೂಪಿಣಿಯಾಗಿ ಶ್ರೀ ನಿಮಿಷಾಂಬ ದೇವಿ ಪ್ರಸಿದ್ಧಿಯಾಗಿರುತ್ತಾಳೆ.

**2. ಶ್ರೀ ಮಹಾಲಕ್ಷ್ಮಿದೇವಿ:**

ಈ ದೇವಾಲಯವು ಮುಖ್ಯವಾಗಿ ಶ್ರೀರಂಗಪಟ್ಟಣ ತಾಲ್ಲೂಕು ಕಥೇರಿಯ

ಹಿಂಭಾಗದ ರಸ್ತೆಯಲ್ಲಿ ಕಂಡುಬಂದಿದೆ. ಈ ದೇವಿಯು ಹಿಂದೆ ಗ್ರಾಮದೇವತೆಯಾಗಿದ್ದು, ಇಲ್ಲಿಯೇ ಕ್ರಿ.ಶ. 1449 ರಲ್ಲಿ ಬೇಟೆಗಾರರು ಇದನು ಸ್ಥಾಪಿಸಿದರು. ಈ ದೇವಿಯು ಮೂಲತಃ ಬ್ರಾಹ್ಮಣರ ಆರ್ಚಕರಿಂದ ಪೂಜಿಸುತ್ತಿರುತ್ತಾಳೆ. ಈ ದೇವಿಯು ಕಪ್ಪು ಶಿಲೆಯಿಂದ ನಿಂತಿರುವ ಬಂಗಿಯಲ್ಲಿ ಕಂಡು ಬಂದಿದ್ದು, ಈ ದೇವಿಯನ್ನು ಕೋಟೆಯಮ್ಮ ಎಂತಲೂ ಕರೆಯಲಾಗಿದೆ. ಅಂದರೆ ಯಾವ ಶತ್ರುಗಳು ವೈರಿಗಳು ಗ್ರಾಮಕ್ಕೆ ಯಾವುದೇ ರೀತಿಯಲ್ಲಿ ತೊಂದರೆ ಉಂಟಾಗದೆ ಈ ದೇವಿಯು ಕೋಟೆಯ ರಕ್ಷಣೆಯಂತೆ ಕಾವಲು ನಿಂತ ಕಾರಣ ಈ ಹೆಸರಿನಿಂದ ಕರೆಲಾಗುತ್ತದೆ.

**ಪ್ರತಿಮಾ ಶಾಸ್ತ್ರ:** ಈ ದೇವಿಯು 6 ಕೈ ಗಳನ್ನು ಹೊಂದಿದ್ದು, ಪ್ರತಿಯೊಂದು ಕೈಯಲ್ಲಿ ವಿಭಿನ್ನ ಆಯುಧಗಳನ್ನು ಹಿಡಿದಿರುತ್ತಾಳೆ. ಅಂದರೆ ಕತ್ತಿ, ಡಮರು, ಪದ್ಮ, ಮುದ್ಗಲ, ಮುಷ್ಠಿ ಪಾನ್ ಬಟ್ಟಲು. ಈ ತಾಯಿಯ ಮುಖದಲ್ಲಿ ರಾಕ್ಷಸರನ್ನು ಸಂಹಾರ ಮಾಡಿದ ನಂತರ ಸೌಮ್ಯತೆಯ ಮುಖ್ಯಮುದ್ರೆಯನು ಕಾಣಬಹುದಾಗಿದೆ.

**ಆಹಾರ ಪದ್ಧತಿ:** ಈ ದೇವಿಗೆ ಮುಖ್ಯವಾಗಿ ಪೊಂಗಲ್, ಮೊಸರನ್ನ, ಸಕ್ಕರೆ ಪೊಂಗಲ್ ಇಟ್ಟು ಇಲ್ಲಿ ಪೂಜೆ ಮಾಡಿ ತೀರ್ಥ ಹಾಕಿದ ನಂತರ ಭಕ್ತಾಧಿಗಳಿಗೆ ಪ್ರಸಾದವಾಗಿ ನೀಡುವರು.

**ಶಾಸನ:** ದೇವಾಲಯದ ಮುಖ್ಯಮಂಟಪದ ಬಲಭಾಗದ ಗೋಡೆಯ ಮೂಲೆಯಲ್ಲಿ ಈ ದೇವಾಲಯಕ್ಕೆ ಸಂಬಂಧಪಟ್ಟ ಕನ್ನಡ ಶಾಸನವಿದೆ.

**ಹರಕೆ:** ಈ ದೇವಿಯ ಬಳಿ ಮುಖ್ಯವಾಗಿ ವಿವಾಹ ಆಗದೆ ಇರುವವರು ಕದಳಿ (ಹೋಮ), ವಿವಾಹ, ಕುಂಬ ವಿವಾಹ, ಮೃತ್ಯುಂಜಯ ಹೋಮ ಹಾಗೂ ವಿಶೇಷವಾಗಿ ದಸರಾ ಕಾಲದಲ್ಲಿ ಚಂಡಿ ಹೋಮವನ್ನು ನಡೆಸಲಾಗುತ್ತದೆ. ಇಲ್ಲಿ ಪ್ರತಿವರ್ಷವು ಬಹಳ ವೈಭವದಿಂದ ಪೂಜೆಯನ್ನು ನೆರೆವೇರಿಸುತ್ತಿದ್ದು, ರಾಂಪುರದವರು ಮಾತ್ರ ಇಲ್ಲಿಗೆ ಪ್ರಥಮ ಪೂಜೆಯನ್ನು ಮಾಡುತ್ತಿದ್ದಾರೆಂಬ ವಾಡಿಕೆಯಾಗಿದೆ.

**3. ಮರುಗಮ್ಮ ದೇವಿ:**

ಈ ದೇವಾಲಯ ಕೆ.ಆರ್.ಎಸ್. ಮುಖ್ಯ ರಸ್ತೆಯ ಸಂತೆಮಾಳದ ಹತ್ತಿರ ಕಂಡುಬರುತ್ತದೆ. ಅಂದರೆ ಈ ತಾಯಿ ಮೂಲತಃ ತಮಿಳು ನಾಡಿನಿಂದ ಒಂದು ಇಲ್ಲಿ ನೆಲೆಗೊಂಡಿರುವುದಾಗಿ ಇಲ್ಲಿನ ಜನರ ನಂಬಿಕೆಯಾಗಿದೆ. ಮೂಲ ದೇವಿಯ ವಿಗ್ರಹವು ಸರ್ಕಾರಿ ಇಂಜಿನಯರ್ ಕಾಲೇಜು ಜಲಸಂಪನ್ಮೂಲ ಇಲಾಖೆ ಸಂತೆಮಾಳದ ಹತ್ತಿರ ಇದ್ದು, ಕಾಲ ನಂತರ ರಸ್ತೆಯ ಅಗಲೀಕರಣದಿಂದಾಗಿ ಈ ದೇವಿಯನ್ನು ಸ್ವಲ್ಪ ಹತ್ತಿರದ ಹಳೆಯ ಗ್ರಾಮಪಂಚಾಯಿತಿಯ ಸಮೀಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ದೇವಿಯು ಯಾವುದೇ ಭಕ್ತರು ಕಷ್ಟ ಎಂದು ಬಂದರೆ ತಕ್ಷಣ ಮರುಗುವ/ಕರುಣೆ ತೋರುವ ದೈವವಾಗಿರುವ ಕಾರಣ ಈ ದೇವಿಗೆ ಶ್ರೀ ಮರುಗಮ್ಮದೇವಿ ಎಂದು ಕರೆಯಲಾಗಿದೆ.

**ಪ್ರತಿಮಾಶಾಸ್ತ್ರ:** ಈ ದೇವಿಯ ವಿಗ್ರಹವು ಕಪ್ಪು ಶಿಲೆಯಿಂದ ನಿರ್ಮಿಸಿದೆ. ಸುಮಾರು 31/2 ಅಡಿ ಎತ್ತರವಿದ್ದು ಇಲ್ಲಿ ಮುಖ್ಯವಾಗಿ ಬಲಭಾಗಕ್ಕೆ ಮರುಗಮ್ಮ ಎಡಕ್ಕೆ

ಚಾಮುಂಡೇಶ್ವರಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ತಾಯಿಯ ಎರಡು ಕೈಗಳು ಶಿಥಿಲಗೊಂಡಿರುತ್ತದೆ. ಆದರೂ ಸಹ ಎಂದಿನಂತೆ ವಾರಕ್ಕೆ 3 ದಿನಗಳಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಈ ದೇವಿಗೆ ಯಾವುದೇ ಅರ್ಚಕರಿಲ್ಲದ ಕಾರಣ ಭಕ್ತಾಧಿಗಳೂ ತಾವೇ ಸ್ವತಃ ಪೂಜೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ಚಿಕ್ಕ ವಯಸ್ಸಿನಿಂದ ಒಬ್ಬ ವಯಸ್ಸಾದ ಮುದುಕಿಯೊಬ್ಬಳು ಇಲ್ಲಿಯೇ ಪೂಜೆಯನ್ನು ಮಾಡುತ್ತಿದ್ದು ಇವರು ಭಕ್ತಾಧಿಗಳಿಗೆ ಯಂತ್ರ ಧಾರಣೆಯನ್ನು ಮಾಡಿ ಆ ದೇವಿಯ ಕೃಪೆಗೆ ಪಾತ್ರರಾಗಿರುತ್ತಾರೆ.

ಈ ದೇವಿಗೆ ಶುದ್ಧ ಚೊಕ್ಕ ಭೋಜನವಾಗಿದ್ದು , ಭಕ್ತಾಧಿಗಳು ತಮ್ಮ ಹರಕೆಗಳಿಗಾಗಿ ಕೋಳಿ, ಕುರಿ, ಬೇಟೆಗಳನ್ನು ನೀಡಲಾಗುತ್ತದೆ.

ಇಲ್ಲಿನ ವಿಶೇಷತೆ ಎಂದರೆ ಈ ದೇವಿಯ ಎರಡು ಕೈಗಳು ಶಿಥಿಲಗೊಂಡಿರುವುದು. ಇಲ್ಲಿಗೆ ಶ್ರೀರಂಪಟ್ಟಣದಿಂದ 5 ಮಂದಿ ಪುರೋಹಿತರನ್ನು ಕರೆತಂದು ಜೀರ್ಣೋದ್ಧಾರ ಮಾಡಲಾಯಿತು ಎಂದು ನಂಬಲಾಗಿದೆ. ಅಂದರೆ ನಮ್ಮ ಹಿಂದೂ ಸಂಪ್ರದಾಯದಲ್ಲಿ ಒಂದು ಭಾರಿ ಯಾವುದೇ ಮೂಲ ಮೂರ್ತಿಯು ಭಿನ್ನವಾಗಿದ್ದಲ್ಲಿ ಅದು ಪೂಜೆಗೆ ಅನರ್ಹವೆಂದು ಭಾವಿಸಿದ್ದು , ಆದರೆ ಪಂಚಾಂಗದ ಪ್ರಕಾರ ಪುರೋಹಿತರು ನಮ್ಮ ಮನೆಯಲ್ಲಿ ನಮ್ಮ ತಾಯಿಗೆ ಕೈ ಕಾಲುಗಳು ಮುರಿದು ಹೋದರೆ ನಾವು ಅವರನ್ನು ಸುಮ್ಮನೆ ಬಿಟ್ಟು ಬಿಡುತ್ತೇವಾ ಅಂತೆಯೇ ಈ ದೇವಿಯು ತಬ್ಬಲಿಯಾಗಿ ಇರುವುದು ಬೇಡ ಹಾಗೂ ಈ ದೇವಿಯ ಆರೈಕೆ ನಮ್ಮೆಲ್ಲರ ಕರ್ತವ್ಯವೆಂದು ತಿಳಿಸಿ ಈ ದೇವಿಯನ್ನು ಇಲ್ಲಿಯೇ ಪ್ರತಿಷ್ಠಾಪಿಸಲಾಯಿತು ಎಂದು ತಿಳಿಯಲಾಗಿದೆ. ಯುಗಾದಿಯ ನಂತರ ಇಲ್ಲಿ ವರ್ಷಕ್ಕೊಮ್ಮೆ ವಿಶೇಷ ಮೆರವಣಿಗೆ ಪೂಜೆ ಆಚರಣೆಗಳನ್ನು ನೆರವೇರಿಸಲಾಗುತ್ತದೆ.

### 4. ಶ್ರೀ ಹಿರಿದೇವಮ್ಮ ದೇವಿ ದೇವಾಲಯ:

ಈ ದೇವಾಲಯವು ಶ್ರೀರಂಗಪಟ್ಟಣ ತಾಲ್ಲೂಕು, ಕೆ.ಆರ್.ಎಸ್. ಮುಖ್ಯರಸ್ತೆಯಲ್ಲಿ ಬರುವ ಬೆಳಗೊಳ ಎಂಬ ಗ್ರಾಮದ ದೇವತೆಯಾಗಿ ನೆಲೆಸಿದ್ದಾಳೆ. ಅಂದರೆ ಅಗಸ್ತ್ಯ ಮುನಿ ಎಂಬ ಋಷಿಯಿಂದ ಈ ಸ್ಥಳಕ್ಕೆ ನಾಮಾಂಕಿತವಾಯಿತು.

ಈ ದೇವಿಯು ಪ್ರಮುಖವಾಗಿ ನಾವು 7 ಮಂದಿ ಸಪ್ತ ಮಾತೃಕೆಯರನ್ನು ಪುರಾಣ/ ಹಿಂದೂ ಸಂಪ್ರದಾಯದಲ್ಲಿ ಹೇಗೆ ಆರಾಧಿಸುತ್ತೇವೆ. ಅದರಂತೆ ಈ ಗ್ರಾಮದೇವತೆಗಳನ್ನು ಪ್ರಮುಖವಾಗಿ 7 ಜನ ಅಕ್ಕ-ತಂಗಿಯರಂತೆ ಬೇರೆ ಬೇರೆ ಗ್ರಾಮಗಳಿಗೆ ವಿಶೇಷವಾಗಿ ಪೂಜಿಸಲಾಗುತ್ತದೆ. ಅಂದರೆ 1) ಪ್ರಥಮವಾಗಿ ಹಿರಿದೇವಮ್ಮ ತಾಯಿಯೇ ಇತರರಿಗಿಂತ ಹಿರಿಯಾಳಾದ (ದೊಡ್ಡವಳಾದ ಕಾರಣ) ಈ ದೇವಿಗೆ ಹಿರಿದೇವಮ್ಮ ಎಂತಲೇ ಕರೆಯುವ ವಾಡಿಕೆಯಾಗಿದೆ. ಉದಾ:

1. ಬೆಳಗೊಳದ - ಹಿರಿದೇವಮ್ಮ ದೇವಿ
2. ಬುಗತಗಳ್ಳಿ - ಬೇತಾಳೇಶ್ವರಿ ದೇವಿ
3. ಬನ್ನೂರಿನ - ಹೇಮಾದ್ರಾಮ್ಮ ದೇವಿ
4. ಸೊಸಲೆಯ - ಹೊನ್ನದೇವಿ

5. ಮುಗುರು -ಮತಿಬ್ಬದೇವಿ

**ಹಿನ್ನೆಲೆ:** ಈ ದೇವಿಯು ಮೂಲತಃ ಕೊಡಗನಿಂದ ಬಂದವಳಾಗಿದ್ದು, ಈ ದೇವಿಯು ಕಾವೇರಿನದಿ ಸಂಗಮದ ಕಡೆಗೆ ಬರುತ್ತಿರುವ ಸಮಯದಲ್ಲಿ ಈ ಗ್ರಾಮವನ್ನು ತಲುಪುವ ವೇಳೆಯ ಸಾಯಂಕಾಲವಾದ ಕಾರಣ ಇಲ್ಲಿನ ಅಚ್ಚ ಹಸಿರಿನಿಂದ ಕೂಡಿದ ವಾತಾವರಣಕ್ಕೆ ಮನಸೋತ ಈ ದೇವಿಯು ಇಲ್ಲಿಯೇ ನೆಲೆಗೊಂಡಳೆಂದು ಈ ವಿಚಾರವನ್ನು ಒಬ್ಬ ವೃದ್ಧ ಮಹಿಳೆಯ ಬಳಿ ತಿಳಿಸಿದ್ದು, ನನಗೆ ಲೋಕ ಸಂಚಾರ ಮಾಡಿ ರಾತ್ರಿಯ ವೇಳೆ ಯಾವುದೇ ನಾಯಿ, ನರಿ, ಕೋಳಿ, ಕುರಿಗಳ ಶಬ್ದವು ಕೇಳದೇ ಇರುವ ಊರಿನ ಹೊರ ವಲಯದಲ್ಲಿ ನನ್ನನ್ನು ಪ್ರತಿಷ್ಠಾಪಿಸಬೇಕೆಂದು ಕೇಳಿಕೊಂಡಳು. ಅದರಂತೆ ಈ ದೇವಿಯು ಮೂಲ ಸ್ಥಳ ಕಾವೇರಿ ನದಿಯ ಹೊಳೆಯ ಹತ್ತಿರದಲ್ಲಿ ನಿರ್ಮಿಸಲಾಗಿದ್ದು, ಪ್ರತಿವರ್ಷ ಕೊನೆಯ ಕಾರ್ತಿಕ ಸೋಮವಾರದಲ್ಲಿ ವಿಶೇಷವಾದ ಪೂಜೆಯನ್ನು ನೆರವೇರಿಸಲಾಗುತ್ತದೆ. ಇಲ್ಲಿ ಪ್ರತಿವರ್ಷ ಕಾರ್ತಿಕ ಮಾಸದ ಕೊನೆಯ ವಾರದಲ್ಲಿ ಅಂದರೆ ಶುಕ್ರವಾರ ದೇವಿಯ ಹೂವಿನ ಚಪ್ಪರದ ತೇರು, ಭಾನುವಾರ ಕುದುರೆ ವಾಹನ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗಳನ್ನು ತಂದು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಸೋಮವಾರ ಜಾತ್ರೆ ಮಹೋತ್ಸವವನ್ನು ನೆರವೇರಿಸಲಾಗುತ್ತದೆ.

**ಪ್ರತಿಮಾಶಾಸ್ತ್ರ:** ಈ ದೇವಿಯು ಕಕ್ಷಾಸನ ಬಂಗೀಯಲ್ಲಿ ಕುಳಿತಿರುವ ಕಪ್ಪು ಶಿಲೆಯಲ್ಲಿ ಕೆತ್ತಲಾಗಿದ್ದು. ಅಮ್ಮನವರ 4 ಕೈಯಲ್ಲಿ ಶಂಕು ಚಕ್ರ ಅಭಯ ವಂದ ಹಸ್ತ, ಸುಮಾರು 4 ಅಡಿ ಎತ್ತರವಿದ್ದು, ವಿಶೇಷವಾದ ಆಹಾರ ಪದ್ಧತಿ ಎಂದರೆ 1. ಹುರುಳಿಕಾಳು ಪಾಲ್ಯ, 2. ಬೇಲದ ಹಣ್ಣೂ ಪಾನಕ.

**ಹರಕೆಗಳು:** ಸಂತಾನಭಾಗ್ಯ, ವಿವಾಹ ಭಾಗ್ಯ, ಆರೋಗ್ಯಭಾಗ್ಯ, ಧನಭಾಗ್ಯ, ಧಾನ್ಯ ಭಾಗ್ಯ. ಉಳಿದ ಎಲ್ಲಾ ತಂಗಿಯರ ಮೂರ್ತಿ ಶಿಲ್ಪವು ಸು. 3 ಅಡಿ ಎತ್ತರದಲ್ಲಿ ಕೆತ್ತಿರುತ್ತಾರೆ. ಈ ದೇವಿಯನ್ನು ಕೆಳಕಂಡ ಮಂತ್ರದಿಂದ ಆರಾಧಿಸಲಾಗುತ್ತದೆ.

**"ಪದ್ಮಾಸನ ಸೀತೆ ದೇವಿ**
**ಪರ ಬ್ರಹ್ಮಸ್ವರೂಪಿಣಿ ಪರಮೇಶ್ವರಿ**
**ಜಗನ್ಮಾತಾ ಶ್ರೀ ಮಹಾಲಕ್ಷ್ಮಿ ನಮೋಸ್ತುತೇ"**

**5. ಶ್ರೀ ಮಹಾಕಾಳಿದೇವಿ ದೇವಾಲಯ:**

ಭೂಮಿಯ ದೈವಿಕ ರಕ್ಷಕಳಾಗಿದ್ದು, ಹಿಂದೂ ಧರ್ಮದಲ್ಲಿ ಕಾಳಿಕಾ ಎಂದು ಅಂದರೆ ವಿನಾಶಕಾರಿ ಶಕ್ತಿಯಿಂದ ಹೊಂದುವಳು. ಇದು ಸಹ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಟಿ.ಎಂ.ಹೊಸೂರಿನ ಗೇಟ್‌ನ ಬಳಿ ನಿರ್ಮಿಸಲಾಗಿದೆ. ಈ ದೇವಾಲಯವು ಕೆ. ಶೆಟ್ಟಹಳ್ಳಿಯಿಂದ 3 ಕಿ.ಮೀ. ದೂರದಲ್ಲಿ ಒಂದು ಹಿಂದೂ ಸಂಪ್ರದಾಯವನ್ನು ಹೊಲುವ ಮಹಾ ಶಕ್ತಿಯುಳ್ಳ ದೇವಿಯಾಗಿ ನೆಲೆಸಿದ್ದಾಳೆ.

ಈ ದೇವಿಗೆ ಪ್ರತಿನಿತ್ಯ ವಿಶೇಷ ಪೂಜೆ ಇರುತ್ತದೆ. ಅದರಲ್ಲಿ ಮಂಗಳವಾರ, ಶುಕ್ರವಾರ, ಭಾನುವಾರ ಮತ್ತು ಅಮಾವಾಸ್ಯೆ ಮತ್ತು ಹುಣ್ಣಿಮೆ ವಿಶೇಷ ಪೂಜೆಗಳ ಜೊತೆಗೆ

ಪ್ರತಿಂಗಾರ ಹೋಮವನ್ನು ನಡೆಸಲಾಗುತ್ತದೆ.

**ಹರಕೆ:** ಇಲ್ಲಿ ದೃಷ್ಟಿದೋಷಗಳು, ವಾಮಚಾರ, ಮಾಟ ಮಂತ್ರಗಳ ಸಮಸ್ಯೆಯಿಂದ ವಿಮುಕ್ತಿ ಪಡೆಯಬಹುದಾಗಿದೆ.

**ಪ್ರತಿಮಾಶಾಸ್ತ್ರ:** ಶ್ರೀ ಮಹಾಕಾಳಿ ಶಿವನ ಪತ್ನಿ. ಇದು ಸಾಕ್ಷಾತ್ ಪಾರ್ವತಿಯ/ ದುರ್ಗಾ ಅತ್ಯಂತ ಜನಪ್ರಿಯ ವಿಶೇಷ ರೂಪವಾಗಿದ್ದು, ಇಲಿ ದೇವಿಯಮೂರ್ತಿ ಅತ್ಯಂತ ಸುಂದರವಾಗಿದೆ. ಈ ದೇವಿಯು ನಿಂತಿರುವ ಬಂಗೀಯು ನಮ್ಮ ಮುಂದೆಯೇ ನಿಂತ ರೀತಿಯಲ್ಲಿ ಭಾಸವಾಗುತ್ತದೆ. ಇಲ್ಲಿ ಪ್ರಮುಖವಾಗಿ ಅಮವಾಸ್ಯೆಗಳಲ್ಲಿ ಹೆಚ್ಚಿನ ಭಕ್ತಾಧಿಗಳ ಸಂಖ್ಯೆಯನ್ನು ಕಾಣಬಹುದಾಗಿದೆ.

ಪ್ರತಿಂಗಾರ ಹೋಮವು ಇಲ್ಲಿನ ವಿಶೇಷವಾಗಿದ್ದು, ಯಾವ ನಕರಾತ್ಮಕ ಸಮಸ್ಯೆ ಅನುಭವಿಸುವರೂ ಈ ಸಾಮಾಗ್ರಿಯನ್ನು ಇಲ್ಲಿಯೇ ಪಡೆದು ಇದೇ ಸ್ಥಳದಲ್ಲಿ ನೆರವೇರಿಸುವವರು.

ಇಲ್ಲಿ ದೇವಾಲಯದ ಸುತ್ತ ದೊಡ್ಡ ಪ್ರಮಾಣದ ಹಾವಿನ ಆಕೃತಿಯು ಸುತ್ತುವರಿದೆ. ಕಾಳಿಮಾವು 10 ಮಹಾವಿದ್ಯೆಗಳಲ್ಲಿ ಮೊದಲನೆಯದು ಮತ್ತು ಈ ದೇವಿಯೇ ಹೊಲಿಸಿಕೊಳ್ಳಲು ಇವರು ಈ ವಿಧಾನವನ್ನು ಪೂಜಾಕಾರ್ಯವಾಗಿ ಬಳಸಲಾಗಿದೆ.

ಈ ದೇವಿಯು ತನ್ನ ಪತಿಯಾದ ಶಿವನನ್ನು ಇವಳ ಪಾದದ ಕೆಳಗೆ ಶಾಂತವಾಗಿ ಮಲಗಿರುವ ಹಾಗೂ ಈ ದೇವಿಯು ಅವನ ಮೇಲೆ ನೃತ್ಯ ಮಾಡುವ ಮತ್ತು ನಿಂತಿರುವ ರೂಪದಲ್ಲಿ ಗೋಚರಿಸಲಾಗಿದೆ. ಈ ದೇವಿಯನ್ನು ಪ್ರಮುಖವಾಗಿ ಬಂಗಾಳ, ಅಸ್ಸಾಂ, ಕಾಶ್ಮಿರ, ಕೇರಳ, ಶ್ರೀಲಂಕಾದ ಸಮುದ್ರಗಳಿಗೆ ಪೂಜಿಸಲಾಗುತ್ತದೆ.


**ಮಹಾಕಾಳಿ ದೇವಿ ಹಿನ್ನೆಲೆ:** ದಾರುಕನೆಂಬ ಕುಖ್ಯಾತ ಅಸುರನಿದ್ದನು. ಅವನು ಬ್ರಹ್ಮನನ್ನು ಮೆಚ್ಚಿಸಿ ವರವನ್ನು ಪಡೆದನು. ಈ ವರವು ದೇವತೆಗಳಿಗೆ ಮತ್ತು ಬ್ರಾಹ್ಮಣರಿಗೆ ದುಃಖವನ್ನುಂಟು ಮಾಡಲು ಅವಕಾಶ ಮಾಡಿಕೊಟ್ಟಿತ್ತು. ಅಂತೆಯೇ ಈ ಅಸುರನು ಸ್ವರ್ಗದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಲು ಪ್ರಾರಂಭಿಸಿದನು. ಇದನ್ನು ನೋಡಿದ ಎಲ್ಲಾ ದೇವರುಗಳು ಬ್ರಹ್ಮ ಮತ್ತು ವಿಷ್ಣುವಿನ ಬಳಿ ಬಂದು ಇವನನ್ನು ಒಬ್ಬ ಮಹಿಳೆ ಮಾತ್ರ ದುಷ್ಟ ದಾರುಕನನ್ನು ಕೊಲ್ಲಬಲ್ಲಳು ಎಂದು ಹೇಳಿದರು. ಆದರೆ ಇದರಲ್ಲಿ ಸೋಲನ್ನು ಅನುಭವಿಸಿದ ದೇವತೆಗಳೆಲ್ಲರೂ ಕೈಲಾಸ ಪರ್ವತದಲ್ಲಿರುವ ಶಿವನನ್ನು ಬೇಟಿಮಾಡಿ ಪ್ರಾರ್ಥಿಸಿದರು. ಇದರಿಂದ ಪಾರ್ವತಿಯ ಒಂದು ಭಾಗವು ಶಿವನಲ್ಲಿ ಸೇರಿಕೊಂಡಿದ್ದು, ಶಿವನ ಕಂಠದಲ್ಲಿರುವ ವಿಷದಿಂದಾಗಿ ಭಗವತಿ ಮಾತೆ ಕಪ್ಪು ದೇವತೆಯಾಗಿ ಮಾರ್ಪಟ್ಟಳು. ಆಗ ಶಿವನ ತನ್ನ ಮೂರನೇ ಕಣ್ಣು ತೆರೆದು ಉಗ್ರ ರೂಪದಲ್ಲಿ ಕಾಳಿ ದೇವಿಯಾಗಿ ಕಾಣಿಸಿಕೊಂಡಳು.

ಕಾಳಿಯು ಶಿವನಂತೆ ಮೂರುಕಣ್ಣನೆ ಹೊಂದಿದ್ದು ಚಂದ್ರ ರೇಖೆಯಾ ಹೊಂದಿದ್ದಳು. ಗಂಟಲಿನಲ್ಲಿ ಕಾರ್ಲಾ ವಿಷದ ಚಿಹ್ನೆ ಇತ್ತು. ಅವಳು ತ್ರಿಶೂಲವನ್ನು ಹೊತ್ತಿದ್ದಾಳೆ.

## ಛಾಯಾಚಿತ್ರಗಳು



1. ಶ್ರೀ ನಿಮಿಷಾಂಬದೇವಿ



2. ಶ್ರೀ ಮಹಾಲಕ್ಷ್ಮೀದೇವಿ




3. ಶ್ರೀ ಮರುಗಮ್ಮ ದೇವಿ



4. ಶ್ರೀ ಹಿರಿದೇವಮ್ಮ ದೇವಿ



5. ಶ್ರೀ ಕ್ಷಣಾಂಭಿಕ ದೇವಿ



6. ಶ್ರೀ ಮಹಾಕಾಳಿದೇವಿ

## ಪರಾಮರ್ಶನ ಗ್ರಂಥಗಳು:


1. Gopal R. (2008). Mandya Jilleya Ithihasa mattu Purathatva. Director, Directorate of Archaelogy and Museums. Mysore.
2. Swamy L.N. (1996). History of Srirangapatna. Harman Publishing House. Mysore.
3. Gopinatha Rao T.N. (1914). A  Elements of Hindu Iconography, Volume-01, Volume-02. The Law Printing House. Madras.
4. Divakar R. (2006). Karnatakada Samskruthika Parampare. Kannada mattu Samskruthi Ilake. Bangalore.
5. Ramakrishna K.R. & Gayathri J.V. (2010). Heritage Series Srirangapatna.  Department of Archeology and Museums and Heritage. Bangalore.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.